ಮದುವೆಗೆ ಒತ್ತಾಯಿಸಿದರೆ ಪ್ರಾಣತ್ಯಾಗ ಮಾಡುವುದಾಗಿ ನಿಶ್ಚಯಿಸುತ್ತಾಳೆ. ನನ್ನ ಜೊತೆ ಬಂದು, ಆಕೆಗೆ ಬುದ್ಧಿ ಹೇಳಬೇಕೆಂದು ತಿಳಿಸಿ, ಮಹಾಶ್ವೇತೆ ಚಂದ್ರಾಪೀಡನನ್ನು ರಾಜಧಾನಿ ಹೇಮಕೂಟಕ್ಕೆ ಕರೆದೊಯ್ಯುವಳು. ಪರಸ್ಪರ ನೋಡಿದೊಡನೆಯೇ ಕಾದಂಬರಿ–ಚಂದ್ರಾಪೀಡರಲ್ಲಿ ಅನುರಾಗ ಹುಟ್ಟುತ್ತದೆ, ಬಳಿಕ ಅಗಲಿಕೆಯ ಅನಿವಾರ್ಯತೆ; ವಿರಹವೇದನೆ:

ಅರಮನೆಯುಮವಂತಿಯುಮು।ರ್ವರೆಯಂ ರಾಜ್ಯಮುಮಿವೆಲ್ಲಮೇವುದೊಕಾದಂ
ಬರಿಯಿಲ್ಲದೆಂದು ವಿರಹಾ।ತುರಹೃದಯಂ ನೃಪತನೂಭವಂ ಚಿಂತಿಸಿದಂ

ಅರಸನಿರುಳಾಗೆ ಪಗಲಿನ।ಬರವಂ ಪಗಲಾಗಲಿರುಳ ಬರವಂ ಪಾರು
ತ್ತಿರುಳುಂ ಪಗಲುಂ ಗಂಧ।ರ್ವರಾಜನಂದನೆಯ ವಿರಹದಿಂದ ಚಿಂತಿಸಿದಂ

ಬೆರಲ ಬೆವರಿಂದೆ ನಾಂದಪು।ದಿರದಿನಿಸೆಂಬಂತೆ ಚಿತ್ರತೂಲಿಕೆಯಿಂದಂ
ಬರೆಯದೆ ಕಾಮಿನಿವಿದ್ದಂ।ಬರೆದಳ್ ಚಿಂತೆಯೊಳೆ ಮನುಜ ಮಕರಧ್ವಜನಾ

ಚಂದ್ರಾಪೀಡ ಹೇಮಕೂಟದಿಂದ ಉಜ್ಜಯಿನಿಗೆ ಹಿಂತಿರುಗಿದ ಮೇಲೆ, ಕಾದಂಬರಿಯ ವಿರಹವೇದನೆಯನ್ನು ಕೇಳಿ ಕಳವಳಗೊಳ್ಳುತ್ತಾನೆ. ಆತನಿಗೂ ಕಾದಂಬರಿಯಿಲ್ಲದ ಅರಮನೆ, ಭೂಮಿ ಏಕೆ? ಎನಿಸಿದೆ; ಯಾವಾಗ ರಾತ್ರಿ ಹಗಲಾಗುವುದೋ, ಹಗಲು ರಾತ್ರಿಯಾಗುವುದೋ ಎಂದು ಎದುರು ನೋಡುತ್ತಾನೆ. ಕಾದಂಬರಿಯೂ ಅಷ್ಟೆ; ಬೆರಳಿನ ಬೆವರಿಂದ ಚಿತ್ರವು ತೋಯುವುದೆಂದು ಚಿಂತೆಯಲ್ಲಿಯೇ ಅವನ ಚಿತ್ರವನ್ನು ಬಿಡಿಸುತ್ತಿದ್ದಳು. ಕವಿಗೆ ಕತೆಯ ನಿರ್ವಹಣೆಯ ಬಗ್ಗೆ ಸ್ಪಷ್ಟತೆ ಇರುವುದರಿಂದ, ಪಾತ್ರಗಳ ಭಾವನೆಗಳ ಎಳೆಗಳನ್ನು ಸೂಕ್ಷ್ಮವಾಗಿ ಹೆಣೆದಿದ್ದಾನೆ.

ಚಂದ್ರಾಪೀಡ ತಂದೆಯ ಆಜ್ಞೆಗೆ ಮಣಿದು ಉಜ್ಜಯಿನಿಗೆ ಬರುವಾಗ, ಜೊತೆಗಿದ್ದ ಸೈನ್ಯದ ಸ್ವಲ್ಪ ಭಾಗ ಹಿಂದೆ ಉಳಿಯುತ್ತದೆ. ಕೆಲವು ದಿವಸ ಕಳೆದು ಸೈನ್ಯ ಬಂದರೂ, ವೈಶಂಪಾಯನ ಬರುವುದಿಲ್ಲ. ಆತ ಅಚ್ಛೋದ ಸರೋವರದ ತೀರದಲ್ಲಿ ವಿರಕ್ತನಾಗಿ ಉಳಿದಿರುವ ವಿಷಯ ತಿಳಿಯುತ್ತದೆ. ಮಗನ ನಡತೆಗೆ ಕುಪಿತನಾದ ಶುಕನಾಸನನ್ನು ಸಂತೈಸಿ, ತಾನೇ ಆತನನ್ನು ಕರೆತರುವುದಾಗಿ ಹೇಳಿ ಚಂದ್ರಾಪೀಡ ಪ್ರಯಾಣ ಬೆಳೆಸುವನು. ಜೊತೆಗೆ ಕಾದಂಬರಿ ಸಮಾಗಮದ ಉತ್ಸಾಹ ಅವನ ಮೈತುಂಬಿದೆ:

ನವಲಜ್ಜಾಭಾರನಮ್ರಾನನೆಯನುರದೊಳೊತ್ತಂಬದಿಂದೊತ್ತಿ ಸರ್ವಾಂ
ಗವನ್ನೆನ್ನಂಗಂಗಳೊಳ್ ಮೆಯ್ಗರೆದುವೆನಿಸಿ ಮೆಯ್ಯ್ಯಾರೆತಳ್ತಪ್ಪಿ ದೇವ
ರ್ಗವಣಂ ಕೆಯ್ಗೂಡದಂತಪ್ಪವಳಧರ ಸುಧಾಸಾರಮಂ ತೃಪ್ತಿಪರ್ಯಂ
ತವಲಂಪಿಂ ಪೀರ್ದು ಮದ್ವಲ್ಲಭೆಯ ಸುಸಿಲಸೈಪಿಂ ಕೃತಾರ್ಥಾತ್ಮನಪ್ಪೆಂ

ನಾಚಿಕೆಯಿಂದ ತಲೆತಗ್ಗಿಸಿಕೊಂಡಿರುವ ಇನಿಯಳನ್ನು ಎದೆಗೆ ಒತ್ತಿ ಹಿಡಿದು, ಅವಳ ಸರ್ವಾಂಗಗಳು ನನ್ನ ಅಂಗದಲ್ಲಿ ಲೀನವಾಗಿಬಿಟ್ಟವು ಎಂಬಂತೆ ಗಾಢವಾಗಿ ತಬ್ಬಿಕೊಂಡು, ಚುಂಬಿಸಿ, ಭೋಗಸುಖದ ಪುಣ್ಯದಿಂದ ಕೃತಾರ್ಥನಾಗುತ್ತೇನೆ ಎಂಬ ಅಭೀಪ್ಸೆ ಆತನಲ್ಲಿದೆ. ಕಾದಂಬರಿಯ ಪ್ರಧಾನ ರಸ ಶೃಂಗಾರವಾದರೂ, ನಿರೂಪಣೆಯ ಗಾಂಭೀರ್ಯದಿಂದಾಗಿ ಭವ್ಯವಾದ ಪ್ರೇಮರೂಪಕಗಳು ಸೃಷ್ಟಿಯಾಗುತ್ತವೆ; ಭಾವ, ರಸೋತ್ಪತ್ತಿಯೊಂದಿಗೆ ಭಾಷೆ ಪ್ರಜ್ವಲಿಸುತ್ತದೆ.